# ಡಾ: ಬಿ.ಆರ್.ಅಂಬೇಡ್ಕರ್ ಅಭಿವೃದ್ಧಿ ನಿಗಮ ನಿಯಮಿತ

9ನೇ ಮಹಡಿ, ವಿಶ್ವೇಶ್ವರಯ್ಯ ಚಿಕ್ಕ ಗೋಪುರ, ಡಾ: ಅಂಬೇಡ್ಕರ್ ವೀದಿ, ಬೆಂಗಳೂರು-01.

**ದಿನಾಂಕ: 26.09.2014ರಂದು ಬೆಳಿಗ್ಗೆ 12.30ಗಂಟೆಗೆ ಡಿ.ದೇವರಾಜ ಅರಸು ಭವನ, ವಸಂತನಗರ, ಬೆಂಗಳೂರು ಇಲ್ಲಿ ನಡೆದ ನಿಗಮದ 201ನೇ ನಿರ್ದೇಶಕರ ಮಂಡಳಿಯ ನಡವಳಿಗಳು**

ಹಾಜರಾತಿ

| ಹೆಸರು ಮತ್ತು ಪದನಾಮ | |
|---|---|
| ಶ್ರೀ ಹೆಚ್.ಆಂಜನೇಯ,<br>ಮಾನ್ಯ ಸಮಾಜ ಕಲ್ಯಾಣ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು ಹಾಗೂ ಮಾನ್ಯ ಅಧ್ಯಕ್ಷರು,<br>ಡಾ:ಬಿ.ಆರ್.ಅಂಬೇಡ್ಕರ್ ಅಭಿವೃದ್ಧಿ ನಿಗಮ | ಅಧ್ಯಕ್ಷರು |
| ಶ್ರೀ ಎನ್. ಮಂಜುನಾಥ್ ಪ್ರಸಾದ್, ಭಾ.ಆ.ಸೇ.,<br>ಸರ್ಕಾರದ ಕಾರ್ಯದರ್ಶಿಗಳು,<br>ಸಮಾಜ ಕಲ್ಯಾಣ ಇಲಾಖೆ,<br>ಕರ್ನಾಟಕ ಸರ್ಕಾರ | ಸದಸ್ಯರು |
| ಶ್ರೀ.ಕೆ.ಸಿ.ಶ್ರೀರಾಮಯ್ಯ, ಕ.ಆ.ಸೇ.,<br>ವ್ಯವಸ್ಥಾಪಕ ನಿರ್ದೇಶಕರು<br>ಡಾ:ಬಿ.ಆರ್.ಅಂಬೇಡ್ಕರ್ ಅಭಿವೃದ್ಧಿ ನಿಗಮ | ಸದಸ್ಯ ಕಾರ್ಯದರ್ಶಿಗಳು |
| ಶ್ರೀ ರಾಮಚಂದ್ರಯ್ಯ,<br>ಸರ್ಕಾರದ ಉಪ ಕಾರ್ಯದರ್ಶಿಗಳು,<br>ಆರ್ಥಿಕ ಇಲಾಖೆ, | ಸದಸ್ಯರು |
| ಶ್ರೀಮತಿ ಎಲ್. ರಾಜೇಶ್ವರಿ<br>ಉಪ ಕಾರ್ಯದರ್ಶಿಗಳು,<br>ಸಾರ್ವಜನಿಕ ಉದ್ದಿಮೆಗಳ ಇಲಾಖೆ | ಸದಸ್ಯರು |

ಗೈರು ಹಾಜರಿ:

| | |
|---|---|
| ಶ್ರೀ. ಎಸ್.ಎನ್.ಜಯರಾಂ, ಭಾ.ಆ.ಸೇ.,<br>ಆಯುಕ್ತರು,<br>ಸಮಾಜ ಕಲ್ಯಾಣ ಇಲಾಖೆ, | ಸದಸ್ಯರು |
| ಅಧ್ಯಕ್ಷರು ಹಾಗೂ ವ್ಯವಸ್ಥಾಪಕ ನಿರ್ದೇಶಕರು<br>ರಾಷ್ಟ್ರೀಯ ಪರಿಶಿಷ್ಟ ಜಾತಿ ಹಣಕಾಸು ಮತ್ತು ಅಭಿವೃದ್ಧಿ ನಿಗಮ, ಭಾರತ ಸರ್ಕಾರ, ನವದೆಹಲಿ, | ಸದಸ್ಯರು |
| ನಿರ್ದೇಶಕರು,<br>ಸಾಮಾಜಿಕ ನ್ಯಾಯ ಮತ್ತು ಸಬಲೀಕರಣ ಮಂತ್ರಾಲಯ,<br>ಭಾರತ ಸರ್ಕಾರ, ನವದೆಹಲಿ | ಸದಸ್ಯರು |
| ಶ್ರೀ ಹೀರಾನಾಯಕ್, ಕೆ.ಎ.ಎಸ್.(ಎಸ್‌ಟಿಎಸ್)<br>ವ್ಯವಸ್ಥಾಪಕ ನಿರ್ದೇಶಕರು,<br>ಕರ್ನಾಟಕ ತಾಂಡಾ ಅಭಿವೃದ್ಧಿ ನಿಗಮ | ಸದಸ್ಯರು |

ನಿಗಮದ ವ್ಯವಸ್ಥಾಪಕ ನಿರ್ದೇಶಕರು, ಮಾನ್ಯ ಅಧ್ಯಕ್ಷರು ಮತ್ತು ಸಮಾಜ ಕಲ್ಯಾಣ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು, ಸರ್ಕಾರದ ಕಾರ್ಯದರ್ಶಿಗಳು, ಸಮಾಜ ಕಲ್ಯಾಣ ಇಲಾಖೆ ಹಾಗೂ ಇತರೆ ಹಾಜರಿದ್ದ ಸದಸ್ಯರನ್ನು ಸ್ವಾಗತಿಸಿದರು. ಸಭೆಗೆ ಕೋರಂ ಇರುವುದನ್ನು ಖಾತರಿಪಡಿಸಿ ಸಭೆ ನಡೆಸಬಹುದೆಂದು ಮಾನ್ಯ ಅಧ್ಯಕ್ಷರ ಗಮನಕ್ಕೆ ತರಲಾಯಿತು. ಅಂತೆಯೇ 201ನೇ ಆಡಳಿತ ಮಂಡಳಿಯ ಸಭೆಯ ಅಧ್ಯಕ್ಷತೆಯನ್ನು ವಹಿಸಿ ಸಭೆಯನ್ನು ನಡೆಸಿಕೊಡಲು ಮಾನ್ಯ ಸಚಿವರು ಹಾಗೂ ನಿಗಮದ ಅಧ್ಯಕ್ಷರನ್ನು ಕೋರಿದರು. ಅಂತೆಯೇ ಜರುಗಿದ 201ನೇ ಆಡಳಿತ ಮಂಡಳಿ ಸಭೆಯ ವಿಷಯವಾರು ನಡವಳಿ.

**ವಿಷಯ ಸಂಖ್ಯೆ: 1 : 200ನೇ ನಿರ್ದೇಶಕರ ಮಂಡಳಿ ನಡವಳಿ ಅಂಗೀಕರಿಸುವ ಕುರಿತು**

ದಿನಾಂಕ:18.09.2014ರಂದು ನಡೆದ 200ನೇ ನಿರ್ದೇಶಕರ ಮಂಡಳಿಯು ತೆಗೆದುಕೊಂಡ ವಿಷಯವಾರು ತೀರ್ಮಾನದ ನಡವಳಿಯನ್ನು ಸರ್ವ ಸದಸ್ಯರಿಗೂ ಕಳುಹಿಸಲಾಗಿತ್ತು. ಯಾವುದೇ ಸದಸ್ಯರುಗಳಿಂದ ಸದರಿ ನಡವಳಿಯ ಬಗ್ಗೆ ವ್ಯತಿರಿಕ್ತ ಅಭಿಪ್ರಾಯಗಳು ಬಂದಿರುವುದಿಲ್ಲವೆಂದು ಸಭೆಯ ಗಮನಕ್ಕೆ ತರಲಾಯಿತು ಮತ್ತು ನಡವಳಿಯನ್ನು ಯಥವತ್ತಾಗಿ ಅಂಗೀಕರಿಸುವ ಬಗ್ಗೆ ಸಭೆಯನ್ನು ಕೋರಲಾಯಿತು.

**ನಿರ್ಣಯ: 1 : ಸದಸ್ಯರಿಂದ ವ್ಯತಿರಿಕ್ತ ಅಭಿಪ್ರಾಯಗಳು ಬಾರದ ಕಾರಣ, ನಡವಳಿಯನ್ನು ಯಥಾವತ್ತಾಗಿ ಅಂಗೀಕರಿಸಲು ಸಭೆಯು ನಿರ್ಣಯಿಸಿತು.**

**ವಿಷಯ ಸಂಖ್ಯೆ: 2 : 200ನೇ ನಿರ್ದೇಶಕರ ಮಂಡಳಿ ನಡವಳಿ ಮೇಲೆ ಕೈಗೊಂಡ ಅನುಸರಣಾ ವರದಿ**

200ನೇ ಆಡಳಿತ ಮಂಡಳಿ ಸಭೆಯಲ್ಲಿ ತೆಗೆದುಕೊಂಡ ನಿರ್ಣಯದಂತೆ ಕ್ರಮ ಕೈಗೊಳ್ಳಲಾಗಿದೆ ಎಂದು ಸಭೆಗೆ ವಿವರಿಸಲಾಯಿತು. ಸಭೆಯು ಪರಾಂಭರಿಸಿತು ಮತ್ತು ಯಥಾವತ್ತಾಗಿ ಒಪ್ಪಲು ಚರ್ಚಿಸಿತು.

**ನಿರ್ಣಯ: 2 : ನಡವಳಿಗಳ ಮೇಲೆ ಕೈಗೊಂಡಿರುವ ಕ್ರಮಗಳನ್ನು ಪರಾಂಭರಿಸಿದ ಸಭೆಯು ಕ್ರಮಗಳನ್ನು ಯಥಾವತ್ತಾಗಿ ಒಪ್ಪಲು ನಿರ್ಣಯಿಸಿತು.**

**ವಿಷಯ ಸಂಖ್ಯೆ: 3 : 2013-14ನೇ ಸಾಲಿನ ಆರ್ಥಿಕ ವರ್ಷಕ್ಕೆ ಸಂಬಂಧಿಸಿದಂತೆ ಶಾಸನಬದ್ಧ ಲೆಕ್ಕಪರಿಶೋಧಕರಿಗೆ ಪಾವತಿಸುವ ಶುಲ್ಕವನ್ನು ಹೆಚ್ಚಿಸುವ ಕುರಿತು**

ಮೆ:ನರಸಿಂಹನ್ ಅಂಡ್ ಕಂಪನಿ, ಲೆಕ್ಕ ಪರಿಶೋಧಕರು ಇವರನ್ನು 2013-14ನೇ ಸಾಲಿನ ನಿಗಮದ ಶಾಸನಬದ್ಧ ಲೆಕ್ಕಪರಿಶೋಧಕರಾಗಿ ನೇಮಕಮಾಡಿಕೊಳ್ಳಲಾಗಿದ್ದು, ಸದರಿಯವರಿಗೆ 2012-13ನೇ ಸಾಲಿನಲ್ಲಿ ರೂ.65,000/-ಗಳ ಶುಲ್ಕ ಹಾಗೂ ಅನ್ವಯವಾಗುವ ಸೇವಾ ತೆರಿಗೆಯನ್ನು ನೀಡಲಾಗುತ್ತಿದೆ. 2013-14ನೇ ಸಾಲಿಗೆ ರೂ.85,000/-ಗಳ ಶುಲ್ಕ ಹಾಗೂ ಅನ್ವಯವಾಗುವ ಸೇವಾ ತೆರಿಗೆಯನ್ನು ಪಾವತಿಸುವಂತೆ ಮನವಿ ಸಲ್ಲಿಸಿರುತ್ತಾರೆಂದು ವ್ಯವಸ್ಥಾಪಕ ನಿರ್ದೇಶಕರ ಸಭೆಗೆ ತಿಳಿಸಿದರು.

**ನಿರ್ಣಯ : 3 : ನಿರ್ದೇಶಕ ಮಂಡಳಿ ಸಭೆಯು ವಿಷಯವನ್ನು ಚರ್ಚಿಸಿ ಪ್ರಸ್ತುತ ಪಾವತಿಸುತ್ತಿರುವ ರೂ.65,000/-ಗಳನ್ನು ರೂ.75,000/-ಕ್ಕೆ ಏರಿಸಲು ಶುಲ್ಕ ಹಾಗೂ ಅನ್ವಯವಾಗುವ ಸೇವಾ ತೆರಿಗೆಯನ್ನು ಪಾವತಿಸಲು ನಿರ್ಣಯಿಸಿತು.**

**ವಿಷಯ ಸಂಖ್ಯೆ: 4 : ಭೂ ಒಡೆತನ ಯೋಜನೆಯಡಿ ಅಗತ್ಯವಿರುವ ಅವಧಿ ಸಾಲವನ್ನು 2014–15ನೇ ಸಾಲಿನ ಆಯವ್ಯಯದಲ್ಲಿ ಘೋಷಿಸಿರುವ ಷೇರು ಬಂಡವಾಳದಿಂದ ಉಪಯೋಗಿಸಿ ಕೊಳ್ಳಲು ಅನುಮತಿ ನೀಡುವ ಬಗ್ಗೆ.**

ವ್ಯವಸ್ಥಾಪಕ ನಿರ್ದೇಶಕರು ಭೂ ಒಡೆತನ ಯೋಜನೆಯಡಿ ಭೂಮಿ ಖರೀದಿಸಲು ದೆಹಲಿಯ ಎನ್.ಎಸ್.ಸಿ.ಎಫ್.ಡಿ.ಸಿ ಸಂಸ್ಥೆಯು ಅಗತ್ಯಕ್ಕೆ ತಕ್ಕಂತೆ ಅವಧಿಸಾಲ ಒದಗಿಸುತ್ತಿಲ್ಲವೆಂದೂ, ರಾಷ್ಟ್ರೀಯ ಸರಾಸರಿಯಂತೆ ಒಬ್ಬ ಫಲಾನುಭವಿಗೆ ರೂ.46,000/– ಮಾತ್ರ ಕೊಡಲು ಸಾಧ್ಯವೆಂದು ತಿಳಿಸಿರುವ ಬಗ್ಗೆ ವಿವರಿಸಿ, ಕಳೆದ 2 ವರ್ಷಗಳಿಂದ ಹೆಚ್ಚು ಬೇಡಿಕೆ ಬಂದಿದೆ ಎಂದೂ, 2013–14ನೇ ಸಾಲಿನಲ್ಲಿ 888 ಗುರಿ ಹೊಂದಲಾಗಿದೆ ಎಂದೂ, ಈ ಗುರಿಯನ್ನು ಸಾಧಿಸಲು ಸಹಾ ಅವಧಿಸಾಲ ಅಗತ್ಯವೆಂದೂ, ಈ ಬಾರಿ ಆಯವ್ಯಯದಲ್ಲಿ ಷೇರು ಬಂಡವಾಳ ಲೆಕ್ಕ ಶೀರ್ಷಿಕೆಯಡಿ ಒದಗಿಸಿರುವ ರೂ.52.35 ಕೋಟಿಗಳಿಂದ ಈ ಬಾಬಿಗೆ ಬೇಕಾದ ಅವಧಿಸಾಲದ ಮೊತ್ತವನ್ನು ಉಪಯೋಗಿಸಿಕೊಂಡು 2013–14ನೇ ಸಾಲಿನ ಗುರಿಗೆ ಬೇಕಾದ ಅವಧಿಸಾಲವನ್ನು ಸರ್ಕಾರದ ಅನುಮತಿ ಪಡೆದು ಉಪಯೋಗಿಸಿಕೊಳ್ಳಲು ಮತ್ತು ಈಗಾಗಲೇ ಈ ಬಾಬಿಗೆ ಸಹಾಯಧನದ ಮೊತ್ತದಿಂದ ಹಿಂದಿನ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಸಮಾಜ ಕಲ್ಯಾಣ ಇಲಾಖೆ ಇವರ ಮೌಖಿಕ ಆದೇಶದ ಮೇರೆಗೆ ಅವಧಿಸಾಲದಿಂದ ಉಪಯೋಗಿಸಿಕೊಂಡಿರುವ ರೂ.10.00 ಕೋಟಿಗಳನ್ನು ಸಹಾಯಧನದ ಬಾಬಿಗೆ ಜಮೆಮಾಡಿಕೊಳ್ಳಲು ಸಭೆಯ ಒಪ್ಪಿಗೆ ಕೋರಿದರು. ಮುಂದಿನ ವರ್ಷಗಳಲ್ಲಿ ಈ ಅವಧಿಸಾಲವನ್ನು ರಾಷ್ಟ್ರೀಕೃತ ವಾಣಿಜ್ಯ ಬ್ಯಾಂಕುಗಳಿಂದ ಅಥವಾ ಕರ್ನಾಟಕ ರಾಜ್ಯ ಹಣಕಾಸು ನಿಗಮದಿಂದ ಪಡೆದುಕೊಳ್ಳುವ ಬಗ್ಗೆ, ಫಲಾಪೇಕ್ಷಿಯಿಂದ ದೆಹಲಿಯ ಎನ್.ಎಸ್.ಸಿ. ಎಫ್.ಡಿ.ಸಿ. ಸಂಸ್ಥೆ ವಿಧಿಸುವ ಬಡ್ಡಿಯನ್ನು ವಿಧಿಸಿ, ಉಳಿದ ಬಡ್ಡಿಯನ್ನು ಕೆ.ಎಸ್.ಎಫ್.ಸಿ. ಯಲ್ಲಿ ಪರಿಶಿಷ್ಟ ಜಾತಿಯ ಕೈಗಾರಿಕೋದ್ಯಮಿಗಳು ಪಡೆದ ಸಾಲಕ್ಕೆ ಸಮಾಜ ಕಲ್ಯಾಣ ಇಲಾಖೆ ಮರುಪಾವತಿಸುತ್ತಿರುವ ರೀತಿಯಲ್ಲೇ ಈ ಫಲಾಪೇಕ್ಷಿಗಳಿಗೂ ಮರುಪಾವತಿಸುವ ಬಗ್ಗೆ ಸರ್ಕಾರವನ್ನು ಕೋಡಲು ತೀರ್ಮಾನ ತೆಗೆದುಕೊಳ್ಳುವ ಬಗ್ಗೆ ಸಭೆಯನ್ನು ಕೋರಿದರು.

ನಿರ್ಣಯ: 4 : **ಈ ವಿಷಯವನ್ನು ಸುದೀರ್ಘವಾಗಿ ಚರ್ಚಿಸಿದ ಸಭೆಯು ದೆಹಲಿಯ ಎನ್.ಎಸ್.ಸಿ.ಎಫ್.ಡಿ.ಸಿ. ಸಂಸ್ಥೆಯು ಈ ಬಾಬಿಗೆ ಕೊಡುವ ಅವಧಿ ಸಾಲದ ಜೊತೆಗೆ ಇನ್ನೂ ಹೆಚ್ಚಿಗೆ ಬೇಕಾಗುವ ಅವಧಿಸಾಲವನ್ನು 2014–15ನೇ ಸಾಲಿನಲ್ಲಿ ಸರ್ಕಾರವು ಷೇರು ಬಂಡವಾಳದ ಲೆಕ್ಕ ಶೀರ್ಷಿಕೆಯಡಿ ಒದಗಿಸಿರುವ ಷೇರು ಬಂಡವಾಳ ಮೊತ್ತದಿಂದ ಸರ್ಕಾರದ ಅನುಮತಿ ಪಡೆದು ವಿನಿಯೋಗಿಸಿಕೊಂಡು 2013–14ನೇ ಸಾಲಿನ ಬಾಕಿ ಪ್ರಕರಣಗಳಿಗೆ ಪಾವತಿಸಲು, 2014–15ನೇ ಸಾಲಿನ ಭೌತಿಕ ಗುರಿ ಸಾಧಿಸಲು ವಿನಿಯೋಗಿಸಿಕೊಳ್ಳಲು ಮತ್ತು ಸಹಾಯಧನದ ಮೊತ್ತದಿಂದ ಅವಧಿಸಾಲಕ್ಕೆ ವಿನಿಯೋಗಿಸಿಕೊಂಡಿರುವ ರೂ.10.00ಕೋಟಿಗಳನ್ನು ಸಹಾಯಧನದ ಬಾಬಿಗೆ ಜಮೆ ಮಾಡಿಕೊಳ್ಳಲು ಸಭೆಯು ಸರ್ವಾನುಮತದಿಂದ ನಿರ್ಣಯಿಸಿತು.**

**ವಿಷಯ ಸಂಖ್ಯೆ: 5 : ದಿನಾಂಕ:27.08.2013 ರಂದು ನಡೆದ ನಿಗಮದ 195ನೇ ನಿರ್ದೇಶಕರ ಮಂಡಳಿ ಸಭೆಯ ನಡವಳಿ ವಿಷಯ ಸಂಖ್ಯೆ 10ರಲ್ಲಿ ನಿಗಮದ ರಾಯಚೂರು ಜಿಲ್ಲಾ ಕಛೇರಿಯಲ್ಲಿ ನಡೆದಿದೆ ಎನ್ನಲಾದ ಹಣದ ದುರುಪಯೋಗ ಮತ್ತು ಅವ್ಯವಹಾರ ಕುರಿತು.**

ಮರು ಪರಿಶೀಲನೆಗೆ ಮಂಡಿಸಿದ್ದ ಸದರಿ ವಿಷಯವನ್ನು ಚರ್ಚಿಸಿದ ಆಡಳಿತ ಮಂಡಳಿಯು ದಿನಾಂಕ:27.08.2013ರಂದು ನಡೆದ ನಿಗಮದ 195ನೇ ನಿರ್ದೇಶಕ ಮಂಡಳಿ ಸಭೆಯಲ್ಲಿ ತೆಗೆದುಕೊಂಡ ನಿರ್ಣಯದಂತೆ ಕ್ರಮವಹಿಸಬೇಕಾಗುತ್ತದೆಂಬ ಅಭಿಪ್ರಾಯಕ್ಕೆ ಬರಲಾಯಿತು.

ನಿರ್ಣಯ: 5 : **ಲೋಕಾಯುಕ್ತ ತನಿಖಾ ವರದಿ ಬಂದ ನಂತರ ಈ ವಿಷಯದ ಬಗ್ಗೆ ಮುಂದುವರಿಯಲು ನಿರ್ಣಯಿಸಲಾಯಿತು.**

**ವಿಷಯ ಸಂಖ್ಯೆ: 6 : ಸಫಾಯಿ ಕರ್ಮಚಾರಿ ಪುನರ್ವಸತಿ ಯೋಜನೆಯನ್ನು ಅನುಷ್ಠಾನಗೊಳಿಸುವ ಸಂಬಂಧ ವಿಧಿಸಲಾಗಿರುವ ಷರತ್ತುಗಳನ್ನು ಹಾಗೂ ಪಡೆಯಬೇಕಾಗಿರುವ ದಾಖಲಾತಿಗಳನ್ನು ಸಡಿಲಗೊಳಿಸುವ ಬಗ್ಗೆ.**

ಸಫಾಯಿ ಕರ್ಮಚಾರಿ ಫಲಾಪೇಕ್ಷಿಗಳಿಗೆ ಸಾಲ ಸೌಲಭ್ಯ ಮಂಜೂರಿ ಮಾಡಲು ವಿಧಿಸಿರುವ ಷರತ್ತುಗಳು, ಸಾಲ ಪಡೆಯಲು ಅಡಚಣೆಯಾಗಿರುವ ಬಗ್ಗೆ ಸಫಾಯಿ ಕರ್ಮಚಾರಿ ಸಂಘಟನೆಗಳು ಮತ್ತು ರಾಷ್ಟ್ರೀಯ ಸಫಾಯಿ ಕರ್ಮಚಾರಿ ಆಯೋಗದ ಅಧ್ಯಕ್ಷರು ಪ್ರಸ್ತಾಪಿಸಿರುವ ಅಂಶಗಳನ್ನು ಮಂಡಳಿ ಸಭೆಯು ವಿವರವಾಗಿ ಚರ್ಚಿಸಿತು.

ನಿರ್ಣಯ: 6 :

- **ರೂ.1.00 ಲಕ್ಷ ಮೀರದ ಸಾಲಗಳಿಗೆ ಜನರಲ್ ಲೈಸನ್ಸ್ ಪಡೆಯುವುದರಿಂದ ವಿನಾಯಿತಿ ನೀಡಲು,**
- **ವಸೂಲಾತಿ ಹಿತದೃಷ್ಟಿಯಿಂದ ಸಾಲದ ಮೊತ್ತಕ್ಕೆ ಸ್ಪಷ್ಟವಾಗಿ ಬರೆದ ಹಾಗೂ ಸಹಿ ಮಾಡಿದ ದಿನಾಂಕ ರಹಿತ 6 ಮುಂಗಡ ಚೆಕ್ಕುಗಳನ್ನು ಮಾತ್ರ ಪಡೆಯಲು,**
- **ನಿಗಮದಿಂದ ಈ ಯೋಜನೆಗೆ ನೀಡುವ ಸಾಲಗಳಿಗೆ ಇನ್ನು ಮುಂದೆ ಬ್ಯಾಕ್ ಎಂಡ್ ಸಬ್ಸಿಡಿಯನ್ನು ಪಡೆಯುವುದರಿಂದ ವಿನಾಯಿತಿ ನೀಡಲು ಮಂಡಳಿ ಸಭೆಯು ನಿರ್ಣಯಿಸಿತು.**

**ವಿಷಯ ಸಂಖ್ಯೆ: 7 : ಮೈಸೂರು ದಸರಾ ವಸ್ತು ಪ್ರದರ್ಶನ 2014ರಲ್ಲಿ ನಿಗಮದ ಸಾಧನೆಯ ಪ್ರಗತಿಯನ್ನು ಪ್ರತಿಬಿಂಬಿಸುವ ಮಳಿಗೆ ತೆರೆಯುವ ಬಗ್ಗೆ.**

ಪ್ರತಿವರ್ಷದಂತೆ ಸರ್ಕಾರದ ಸೂಚನೆಯನ್ವಯ ಮೈಸೂರು ವಸ್ತು ಪ್ರದರ್ಶನ ಮೈದಾನದಲ್ಲಿ ನಿಗಮದ ಕಾರ್ಯಕ್ರಮಗಳನ್ನು ಬಿಂಬಿಸುವ ವಸ್ತು ಪ್ರದರ್ಶನ ಮಳಿಗೆಯನ್ನು ತೆರೆಯುವ ಬಗ್ಗೆ ಚರ್ಚಿಸಲಾಯಿತು.

**ನಿರ್ಣಯ: 7 : ದಸರಾ ರೂ.10.00ಲಕ್ಷ ವೆಚ್ಚದಲ್ಲಿ ನಿರ್ಮಿತಿ ಕೇಂದ್ರ ಅಥವಾ ಕರ್ನಾಟಕ ಗ್ರಾಮೀಣ ಮೂಲ ಸೌಕರ್ಯ ಅಭಿವೃದ್ಧಿ ನಿಯಮಿತ ಸಂಸ್ಥೆಗಳ ಮೂಲಕ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕ ಅಧಿನಿಯಮದಂತೆ ವಸ್ತುಪ್ರದರ್ಶನದ ಮಳಿಗೆಯನ್ನು ತೆರೆಯಲು ಅನುಮೋದನೆ ನೀಡಲು ನಿರ್ಣಯಿಸಿತು.**

**ವಿಷಯ ಸಂಖ್ಯೆ: 8 : ನಿಗಮದಲ್ಲಿ ಪಸ್ತುಸ್ತ ಖಾಲಿ ಇರುವ ಸಿಬ್ಬಂದಿಗಳನ್ನು ನೇಮಿಸಲು ನಿರ್ದೇಶಕ ಮಂಡಳಿ ಅನುಮೋದನೆ ಪಡೆದು ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸುವ ಬಗ್ಗೆ.**

ನಿಗಮದಲ್ಲಿ ಇರುವ ಖಾಲಿ ಹುದ್ದೆಗಳ ಬಗ್ಗೆ ಸರ್ಕಾರದ ಕಾರ್ಯದರ್ಶಿಗಳು, ಸಮಾಜ ಕಲ್ಯಾಣ ಇಲಾಖೆರವರು ಮಾನ್ಯ ಸಚಿವರ ಬಳಿ ಚರ್ಚಿಸಿ, ನಂತರ ಕರ್ನಾಟಕ ಲೋಕಸೇವಾ ಆಯೋಗದ ಮೂಲಕ ತುಂಬಲು ಮುಂದಿನ ಕ್ರಮ ಜರುಗಿಸಲು ಚರ್ಚಿಸಲಾಯಿತು.

**ನಿರ್ಣಯ: 8 : ನಿಗಮದಲ್ಲಿ ಇರುವ ಖಾಲಿ ಹುದ್ದೆಗಳನ್ನು ಕರ್ನಾಟಕ ಲೋಕಸೇವಾ ಆಯೋಗದ ಮೂಲಕ ತುಂಬಲು ಸಭೆಯಲ್ಲಿ ನಿರ್ಣಯಿಸಲಾಯಿತು.**

ವಿಷಯ ಸಂಖ್ಯೆ: 9 : **ಡಾ:ಬಿ.ಆರ್.ಅಂಬೇಡ್ಕರ್ ಅಭಿವೃದ್ಧಿ ನಿಗಮದಿಂದ ಭೂ ಒಡೆತನ ಯೋಜನೆಯಡಿ ಸೌಲಭ್ಯ ಪಡೆದಿರುವ ಫಲಾನುಭವಿಗಳಿಗೆ ಗಂಗಾ ಕಲ್ಯಾಣ ಯೋಜನೆಗಳಲ್ಲಿ ಸೌಲಭ್ಯ ನೀಡುವ ಕುರಿತು.**

ಭೂ ಒಡೆತನ ಯೋಜನೆಯಡಿ ಭೂಮಿ ಖರೀದಿಸಿದ ಫಲಾನುಭವಿಗೆ ನಿಗಮದಿಂದ ಬೋರ್‌ವೆಲ್ ಕೊರೆಸಿಕೊಟ್ಟಲ್ಲಿ ಅವರು ನೀರಾವರಿ ಬೆಳೆ ಬೆಳೆದು ಆರ್ಥಿಕವಾಗಿ ಅಭಿವೃದ್ಧಿ ಹೊಂದುತ್ತಾರೆಂದೂ, ಪ್ರಸ್ತುತ ನಿಗಮದಲ್ಲಿ ಒಬ್ಬ ವ್ಯಕ್ತಿಗೆ 2 ಸವಲತ್ತುಗಳನ್ನು ಕೊಡಲು ಅವಕಾಶವಿಲ್ಲವೆಂದೂ, ಈ ಬಗ್ಗೆ ಚರ್ಚಿಸಿ ಸೂಕ್ತ ತೀರ್ಮಾನ ತೆಗೆದುಕೊಳ್ಳಲು ಮಂಡಳಿ ಸಭೆಯನ್ನು ಕೋರಲಾಯಿತು.

ಈ ವಿಷಯದ ಬಗ್ಗೆ ಸರ್ಕಾರದ ಕಾರ್ಯದರ್ಶಿಗಳು, ಸಮಾಜ ಕಲ್ಯಾಣ ಇಲಾಖೆ ಇವರು ಮಾತನಾಡಿ, ಭೂ ಒಡೆತನ ಯೋಜನೆಯಡಿ ಭೂಮಿ ಪಡೆದ ಫಲಾನುಭವಿಗೆ ನಿಗಮದಿಂದ ಕೊಳವೆಬಾವಿ ಕೊರೆಸಿಕೊಡುವುದರಿಂದ ಅವರ ಜೀವನ ಪಟ್ಟ ಸುಧಾರಿತ್ತದೆಂದೂ, ಇಲ್ಲವಾದಲ್ಲಿ ಮಳೆ ಆಧಾರಿತ ಬೆಳೆ ಬೆಳೆಯಲು ಮಳೆ ಅಭಾವವಿದ್ದು, ಅವರ ಆರ್ಥಿಕ ಪರಿಸ್ಥಿತಿ ಸುಧಾರಿಸುವುದಿಲ್ಲವೆಂದು ತಿಳಿಸಿ, ಈ ಯೋಜನೆಗೆ ಒಬ್ಬ ವ್ಯಕ್ತಿಗೆ ಒಂದೇ ಸವಲತ್ತು ಎಂಬ ಷರತ್ತಿನಿಂದ ವಿನಾಯ್ತಿ ನೀಡಿ, ಎರಡನೇ ಸವಲತ್ತು ನೀಡುವುದು ಸೂಕ್ತವೆಂದು ಅಭಿಪ್ರಾಯಿಸಿದರು. ಈ ಬಗ್ಗೆ ಮಂಡಳಿ ಸಭೆಯು ಸುಧೀರ್ಘವಾಗಿ ಚರ್ಚಿಸಿ ಈ ಕೆಳಗಿನಂತೆ ನಿರ್ಣಯ ತೆಗೆದುಕೊಂಡಿತು.

ನಿರ್ಣಯ: 9 : **ಭೂ ಒಡೆತನ ಯೋಜನೆಯಡಿ ಸೌಲಭ್ಯ ಪಡೆದ ಫಲಾನುಭವಿಗಳಿಗೆ ಅಗತ್ಯವಿರುವ ಕಡೆ ಗಂಗಾ ಕಲ್ಯಾಣ ಯೋಜನೆಯಡಿ ಕೊಳವೆಬಾವಿ ಕೊರೆಸಿಕೊಡಲು ನಿರ್ಣಯಿಸಿತು.**

ವಿಷಯ ಸಂಖ್ಯೆ: 10 : **ನಿಗಮದ ಅಧಿಕಾರಿ/ನೌಕರರ ವೈದ್ಯಕೀಯ ವೆಚ್ಚವನ್ನು ಮರುಪಾವತಿಸುವ ಬಗ್ಗೆ.**

ಸದರಿ ವಿಷಯವನ್ನು ನಿರ್ದೇಶಕ ಮಂಡಳಿಯು ಪರಿಶೀಲಿಸಿ ಈ ಕೆಳಗಿನಂತೆ ನಿರ್ಣಯ ತೆಗೆದುಕೊಂಡಿತು.

ನಿರ್ಣಯ: 10 : **ಶ್ರೀ.ಕೆ.ಜಿ.ಮೊಗಳಿ, ಕಛೇರಿ ಅಧೀಕ್ಷಕರು ಇವರ ಹೃದಯ ಸಂಬಂಧಿ ಚಿಕಿತ್ಸೆಗಾಗಿ ಖರ್ಚು ಮಾಡಿದ ರೂ.1,92,428/-ಗಳಲ್ಲಿ ಅರ್ಹ ಮೊತ್ತವಾದ ರೂ.1,57,036/-ಗಳ ವೈದ್ಯಕೀಯ ವೆಚ್ಚವನ್ನು ಪಾವತಿಸಿರುವ ಕ್ರಮಕ್ಕೆ ಘಟನೋತ್ತರ ಅನುಮೋದನೆ ನೀಡಲು ನಿರ್ಣಯಿಸಿತು.**

ವಿಷಯ ಸಂಖ್ಯೆ: 11 : **ಹೊಸ ಕಂಪನಿಯ ಕಾಯ್ದೆ 2013ರಲ್ಲಿನ ಸಾಮಾಜಿಕ ಕಲ್ಯಾಣ ಕಾರ್ಯಕ್ರಮಗಳನ್ನು ಡಾ:ಬಿ.ಆರ್.ಅಂಬೇಡ್ಕರ್ ಅಭಿವೃದ್ಧಿ ನಿಗಮದ ವತಿಯಿಂದ ಅನುಷ್ಠಾನಗೊಳಿಸಲು ಪ್ರಸ್ತಾವನೆಯನ್ನು ಸಲ್ಲಿಸುವ ಕುರಿತು.**

199 ಮತ್ತು 200ನೇ ನಿರ್ದೇಶಕರ ಮಂಡಳಿ ಸಭೆಗಳಲ್ಲಿ ಈ ವಿಷಯವನ್ನು ಮುಂದೂಡಲಾಗಿದ್ದ ಬಗ್ಗೆ ಮಂಡಳಿ ಸಭೆಯ ಗಮನಕ್ಕೆ ತಂದು, ಈ ಬಗ್ಗೆ ಸೂಕ್ತ ನಿರ್ಣಯ ತೆಗೆದುಕೊಳ್ಳಲು ವ್ಯವಸ್ಥಾಪಕ ನಿರ್ದೇಶಕರು ಕೋರಿದರು.

ನಿರ್ಣಯ: 11 : **ಸದರಿ ವಿಷಯವನ್ನು ಚರ್ಚಿಸಿದ ನಿರ್ದೇಶಕ ಮಂಡಳಿ ಸಭೆಯು ಸರ್ಕಾರದಿಂದ ಬಿಡುಗಡೆಯಾಗಿರುವ ಅನುದಾನವನ್ನು ವ್ಯವಸ್ಥಿತ ರೀತಿಯಲ್ಲಿ ಅನುಷ್ಠಾನಗೊಳಿಸಬೇಕಾಗಿರುವುದರಿಂದ ಹೊಸ ಕಂಪನಿ ಕಾಯ್ದೆಯಡಿ ಸಮಾಜಿಕ ಕಲ್ಯಾಣ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲು ಕಷ್ಟಸಾಧ್ಯವಾಗಿರುವುದರಿಂದ ವಿಷಯವನ್ನು ಕೈಬಿಡಲು ಸಭೆಯು ನಿರ್ಣಯಿಸಿತು.**